Regd No M 1299 33 ನೇ ವರ್ಷ ತಾ||12—6—50

ಸತ್ಯವಾದಿ
SATYAVADI

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

1954 ರಲ್ಲಿ ವಿಶ್ವ ಅಂತವಾಗುತದೆ !

ನ್ಯೂಯಾರ್ಕ್ : 1954 ರ ಏಪ್ರಿಲ್ 7 ರಲ್ಲಿ ಪ್ರಪಂಚವು ಕೊನೆಗಾಣುವ ಕಾಲದಲ್ಲಿ ಭದ್ರವಾಗಿರಲು ಅನುಕೂಲಿಸುವಂತೆ 20 ಸಹಸ್ರ ಮಂದಿ ಅನೇರಿಕರು ಭದ್ರವಾದ ನಿವಾಸಸ್ಥಾನ ನಿರ್ಮಿಸುತ್ತಿರುವರು.

ವಲಿಯಾಳಿಗಳು ಹಿಂದೂಕೋಡ್ ಮಸೂದೆಯನ್ನು ಒಪ್ಪುತ್ತಾರೆ-ದು ಡಾ|| ಅಂಬೇಡ್ಕರ್ ಮದ್ರಾಸ್ನಲ್ಲಿ ಹೇಳಿದ್ದಾರೆ

ಪಾಟಿಯಾಲ ಜೀದೀಖಾನೆ ಸ್ಥಿತಿ ಹತೋಟಿಗೆ ಒಂದಿದೆ.

ಸ್ಟಾಲಿನ್ ಚೀಣಕ್ಕೆ ಬಂದಿದ್ದಾರೆಂದು ಲಂಡನ್ ವಂದಿ.

22 ನೇ ತಾರೀಖು
ೀರಾವರಿಗೆ ನೀರು ಬಿಡ್ಲಾಗುತ್ತದೆ

ಪಿ. ಐ. ಓ] ಬೆಂಗಳೂರು, 10

ಕಾವೇರಿ ನದಿಯಲ್ಲಿ ಕಡಿಮೆ ನೀರು ಹರಿಯುತ್ತಿರುವುದರಿಂದ ಕೃಷ್ಣರಾಜಸಾಗರ ಜಲಾಶಯದ ಮೇಲೆ ಕೆಳಗಿರುವ ನಾಲೆಗಳನ್ನು, 10 ನೆ ತಾರೀಖು ತೆರೆಯಬೇಕಾಗಿದ್ದುದನ್ನು ನೀರಾವರಿಗಾಗಿ 22 ನೇ ತಾರೀಖು ತೆರೆಯಲಾಗುವುದು.

ಪರಿಸ್ಥಿತಿಯನ್ನು ಪುನಃ ವಿವರ್ಶಿಸಿ ಸುಧಾರಣೆ ಆ ಒಳಗೆ ಕಂಡುಬಂದಲ್ಲಿ ನೀರನ್ನು ಜಾಗ್ರತವಾಗಿಯೇ ಬಿಡಲಾಗುವುದು.

ವುಡ್ ಲ್ಯಾಂಡ್ಸ್

ಯಶಸ್ವಿ 3 ನೇ ವಾರ

ಮೋತೀಲಾಲ್, ಸೂರೈಯ, ಸಿತಾರ, ಕಕ್ಕೂ ಅಭಿನಯಿಸಿರುವ ಸುಂದರ ಹಿಂದೀ ವಾಕ್ಚಿತ್ರ

LEKH ■ ಲೇಖ್

ಪ್ರತಿ ದಿನ 2 ಪ್ರದರ್ಶನಗಳು

ಮುಸ್ಲಿಂ ಮಹಾಜನರ ಕೋರಿಕೆಯಂತೆ

ಮೆಕ್ಕದ ಹಜ್ ಚಿತ್ರವು

ಲೇಖ್ ಚಿತ್ರದೊಂದಿಗೆ

ಇನ್ನೊಂದುವಾರ ಪ್ರದರ್ಶಿಸಲಾಗುತ್ತೆ

ಅಪೇರಾ

8-6-50 ರಿಂದ

ಮಿಸ್ ಕುಮಾರಿ — ಮೈಕಂ ಮಣಿ

ಪಾತ್ರವಹಿಸಿರುವ ಸುಂದರ ಚಿತ್ರ

ಅತ್ಯದ್ಭುತ ವಿಚಾರಂಗಳಿಂದಲೂ

ಸಾಹಸ ಕಾರ್ಯಗಳಿಂದಲೂ

ಮನಮೋಹಕ ದೃಶ್ಯಗಳಿಂದ ಕೂಡಿದ

ಅವಶ್ಯ ನೋಡಬೇಕಾದ ಚಿತ್ರ

ನಲ್ಲತಂಗಾಳ್

(ಮಲಯಾಳಂ ಭಾಷೆ)

ರಣಜಿತ್ ಟಾಕೀಸಿನಲ್ಲಿ—

9—6—50 ರಿಂದ ವೈಭವಶಾಲಿ ಆರಂಭವಾಗಿದೆ

ನವಲಕ್ಷ್ಮಿ, ಪ್ರಕಾಶರಾವ್ ಶಿವರಾವ್ ನಾರಾಯಣರಾವ್ ಅಭಿನಯಿಸಿರುವ

ಮಧುರ ಸಂಗೀತದಿಂದ ಸ್ವಾರಸ್ಯ ಸನ್ನಿವೇಶಗಳಿಂದ ಕೂಡಿದ ಅಮೋಘ ಸಾಮಾಜಿಕ ತೆಲಗು ಚಿತ್ರ

ಪ್ರಕಾಶ್ ಪ್ರೊಡಕ್ಷನ್ಸ್ ರವರ

ಮೊದಲ ರಾತ್ರಿ

[First Night]

.... ಇಂದೇ ನೋಡಿ ಆನಂದಿಸಿರಿ ....

ಪ್ರತಿ ದಿನ 3 ಆಟಗಳು

— A Prakash Pictures Release

Edited, Printed and Published by M. S. Krishna Rao, at the Satyavadi Press, Chamrajpuram Mysore

ಬೆಂದು ಭಸ್ಮವಾದುವು

ಅಹಮದಾಬಾದಿನ ಸರ್ಕಾರಿ ಧಾನ್ಯ ಡಿಪೋವಿನಲ್ಲಿದ್ದ 2300 ಚೀಲಗಳಷ್ಟು 2 5 ಲಕ್ಷ ರೂ ಬಾಳುವ ಅಕ್ಕಿ, ಗೋಧಿ ಬೆಂಕಿ ಬಿದ್ದು ಮೊನ್ನೆ ನಾಶವಾದವು

ಆಯುಧ ಸಂಬರಾದು

ಅಟ್ಲಾಂಟಿಕ್ ಒಡಂಬಡಿಕೆ ನಿತ್ರರಿಗೆಲ್ಲ ಅಮೇರಿಕಾ ರಹಸ್ಯ ಆಯುಧಗಳನ್ನು ರವಾನಿಸಿದೆಯೆಂದು ವಾಷಿಂಗ್ಟನ್ ವಾರ್ತೆ.

ಅರಮನೆ ವಾಪಸ್

ಪೋಲೀಸ್ ಕ್ರಮ ನಡೆದಾಗ ಕಲ್ಕತ್ತಾದಲ್ಲಿನ ನಿಜಾಂ ಅರಮನೆಯನ್ನು ಭಾರತ ಸರ್ಕಾರ ಅಧೀನಕ್ಕೆ ತೆಗೆದು ಕೊಂಡಿದ್ದು ಈಗ ವಾಪಸ್ ಮಾಡಲಾಗುತ್ತದೆ.

ಸತ್ಕಾರಕೂಟಗಳು

ಯೂರೋಪ್ ಪ್ರವಾಸ ಹೋಗುವ ತಾಯಿನಾಡು ಸಂಪಾದಕ ಶ್ರೀ ಪಿ. ಬಿ. ಶ್ರೀನಿವಾಸ್ ಹಾಗೂ ಆ ಪತ್ರಿಕೆಯ ಮೈಸೂರು ಬಾತ್ಮಿದಾರ ಶ್ರೀ ಶ್ರೀನಿವಾಸ ಮೂರ್ತಿಂವರ ಗೌರವಾರ್ಥ ಮೊನ್ನೆ ಸಂಜೆ ಮೈಸೂರು ಪೌಂಸಭೆ. ನಿನ್ನೆ ದಿನ ಶ್ರೀ ವರಲಕ್ಷ್ಮಿ ಸಂಗೀತ ನುಂದಿರದಲ್ಲಿ ಸತ್ಕಾರ ಸಮಾರಂಭಗಳು ಜರುಗಿದವು.

ವಿಗ್ರಹ ಇಲ್ಲ

ಬೀಳಿ ತಟ್ಟೆಯಲ್ಲಿ ದೇವರನ್ನು ಕೆತ್ತಿ ಪೂಜಿಸುವ ಸಂಪ್ರದಾಯ ಕೊಂಕಣಿ ದೇವಾಲಯಗಳಲ್ಲಿದೆ. ಅಲ್ಲಿ ದೇವರುಗಳು ಪ್ರತಿಮೆ ರೂಪದಲ್ಲಿರುವುದಿಲ್ಲ.

ಕಂಪೆನಿ ಅಡಳಿತದಲ್ಲಿ

ಭಾರತದ ರಾಜ್ಯಭಾರವನ್ನು ಈಸ್ಟ್ ಇಂಡಿಯ ಕಂಪೆನಿ ವಹಿಸಿ ಕೊಂಡಿದ್ದಾಗ ಮಳೆ ಬರಲು ಉತ್ಸವ ಮಾಡಲು ಸರ್ಕಾರದಿಂದ ಧನ ನಿಂಜೂರಾಗುತ್ತಿತ್ತು

ಪಂ|| ನೆಹರು ಹೇಳಿಕೆ

ಭಾರತ ವಿರುದ್ಧ ಪ್ಲಾಕಾರ್ಡ್‌ಗಳನ್ನು ಹೊತ್ತು ಬಂದಿದ್ದ ಕಮ್ಯುನಿಸ್ಟರನ್ನು ಪಂ|| ನೆಹರು ಉತ್ತಮವನ್ನಿಸ್ತರು. ಭಾರತವು ಅನೇಕ ದೇಶಗಳಿಗಿಂತ ಹೆಚ್ಚು ಪ್ರಜಾಸ್ವಭುತ್ವ ಪಾಲನೆಯುದಾಗಿದೆ ಎಂದರು.

ಕನ್ನಂಬಾಡಿ ಕಟ್ಟೆ

ನೀರಿನ ಮಟ್ಟ ಹೆಚ್ಚಿದೆ

ವೆಸೂರು ಕೃಷ್ಣರಾಜೇಂದ್ರ ಗಿಂಡಿ ಕಾರ್ಮಿಕರು ಇಂದಿನಿಂದ ಕೆಲಸಕ್ಕೆ ತೆರಳಿದರು.

ಮಹಾರಾಷ್ಟ್ರದ ಸಮಾಜವಾದಿ ಮುಖಂಡ ಶ್ರೀ ಸಾನೆ ಗುರೂಜಿ ನಿನ್ನೆ ನಿಧನರಾದರೆಂದು ಜೊಂಬಾಯಿ ವರದಿ.

'ವಿಶ್ವ ಸಹೋದರತ್ವ' ಎಂಬ ಅಧಿದಾನದಿಂದ ಅಂತರಾಷ್ಟ್ರೀಯ ಸಂಸ್ಥೆ ಆರಂಭವಾಯಿತೆಂದು ಪ್ಯಾರಿಸ್ ವರದಿ.

ನಾಗ್ಪುರದಲ್ಲಿ ಮೊನ್ನೆ ಮೊನ್ನೆ ಸಮಾವೇಶಗೊಂಡಿದ್ದ ಅಖಿಲ ಭಾರತ ರೈಲ್ವೆ ಫೆಡರೇಷನ್ ಭಾರತ ಸರ್ಕಾರ ತಂದಿರುವ 2 ನೆ ಸೂಡೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದೆ.

ಎಲ್ಲಪ್ಪುಂನಿಂದ ಬಂದ ವಾರ್ತೆಯಂತೆ ಫ್ರೆಂಚ್ ಭಾರತದಿಂದ ಭಾರತಕ್ಕೆ ಬಂದ ಪೋಲೀಸ್ ಪ್ಯಾದೆಯೋರ್ವ 100 ತೊಲೆ ಭಂಗಾರವನ್ನು ಬಚ್ಚಿ ತಂದನೆಂದು ಬಂಧಿಸಲ್ಪಟ್ಟಿದ್ದಾನೆ.

ಸಾಸಿರೈನೂರು ಪೌಂಡು ಪರಿಹಾರವನ್ನು ಲಂಡನ್ ಕಮ್ಯುನಿಸ್ಟ್ ಪಕ್ಷ ಪೋಲೀಸ್ ಅಧಿಕಾರಿಯೋರ್ವನಿಗೆ ಆತನ ಮೇಲೆ ಮಾಡಿದ ಅಪಮಾನಕಾರಿ ಟೀಕೆ ಒಗ್ಗೆ ಕೊಡಬೇಕೆಂದು ನ್ಯಾಯಾಸ್ಥಾನ ತೀರ್ಪಿತ್ತಿದೆ.

ಜಾವಾದ ಪ್ರಚಂಡ ಜ್ವಾಲಾಮುಖಿ ವಾವಾಂಡ ವಾಕ್ ಗೆ ಪಂ|| ನೆಹರು ಸಂಡರ್ಶನವಿತ್ತು ಅಲ್ಲಿ ಏರ್ಪಡಿಸಿದ ಶಿಲಾಸ್ಮಾರಕದಲ್ಲಿ ನಹಿ ಹಾಕಿದರು.

1942 ರ ಜಲೇಜಾವ್ ಜಳವಳದಲ್ಲಿ ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟ ವೀರ ಹೇಮು ಕಲಾನಿಯ ವೃದ್ಧ ನಿಶ್ಶಕ್ತ ತಂದೆಗೆ 1000 ರೂ ಮತ್ತು ತಿಂಗಳಿಗೆ 50 ರೂ ಸಂತಾಪ ಪರಿಹಾರ ಕೊಡಲಾಗಿದೆಯೆಂದು ಬೊಂಬಾಯಿನ ಏಂಥ್ ಹಿಂದೂ ಸೇವಾ ಸಮಿತಿ ತಿಳಿಸಿದೆ

ಭಾರತ ಸರ್ಕಾರವು 50—51 ರಲ್ಲಿ ಸ್ವಾತಂತ್ರಾನಂತರದಲ್ಲಿ ಜನತೆಯ ಗೃಹ ನಿರ್ಮಾಣ ಕಾರ್ಯದ ದೆಸೆಯಿಂದ 25 ರೂಪಾಯಿ ವೆಚ್ಚ ಮಾಡಿದೆಯೆಂದು ಅಧಿಕೃತವಾಗಿ ತಿಳಿಯುತ್ತದೆ.

ಲಂಚ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನಲ್ಲಿ ಹೆಚ್ಚಿದೆಯೆಂತೆ. ತನಿಖೆಗೆ ಸ್ಕಾಟ್ಲೆಂಡ್‌ಯಾರ್ಡ್ ಸಿ ಐ ಡಿ ಗಳನ್ನು ಕರೆಯಿಲಾಗಿದೆ.

ಸಂಪುಟ ೮ ಸಂಚಿಕೆ ೪೨ ॥ ಶ್ರೀ ॥ ತಾ|| 12-6-1950

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಶೃಷ್ಣಾನಂದಮಹಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸದ್ವಾಹಿಕ ಪ್ರಕಟನಮಾಲೆ —
ಸಂಪಾದಕ : ಗುಂಡ್ಮಿ ಮುಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಸ್ಮೃ. ದೇ. ವ. ಸ್ವ. ಸಂಘ

ಆಧುನಿಕ ವಿಕಾಸವಾದ

[ಮುಂದುವರಿದುದು]

ಕಾಷ್ಠ ಮುಂತಾದ ಪಾರ್ಥಿವ ಅಥವಾ ಜಲೀಯ ಪದಾರ್ಥಗಳ ಸಂಸರ್ಗದಿಂದಲೇ ಅಗ್ನಿಯಲ್ಲಿ ದಾಹಕತ್ವವೂ ಪ್ರಕಾಶತ್ವವೂ ಅಭಿವ್ಯಕ್ತವಾಗುತ್ತವೆ, ಅದಾಗ್ಯೂ ದಾಹಕತೆಯೂ, ಪ್ರಕಾಶತೆಯೂ ಕಾಷ್ಠಾದಿಗಳ ಧರ್ಮವೆಂದು ತಿಳಿಯಲ್ಪಡುವುದಿಲ್ಲ. ಅಂತೆಯೇ ಯದ್ಯಪಿ ದೇಹದಲ್ಲಿ ಚೈತನ್ಯವು ಅಭಿವ್ಯಕ್ತವಿರುತ್ತದಾದರೂ ದೇಹದ ಧರ್ಮವು ಚೈತನ್ಯವಲ್ಲ. ದೇಹವಿಲ್ಲದಾಗ ಅದು ಉಪಲಬ್ಧವಾಗುವುದಿಲ್ಲವಾದರೆ, ಇದರಿಂದ ಅದರ ಅಭಾವವನ್ನಾಯಿಸೆಂದು ಹೇಳಲಾಗುವುದಿಲ್ಲ. ಆ ವೇಳೆಯಲ್ಲಿ ಅದರ ಅದಭಿವ್ಯಕ್ತಿ, ನಾಶ, ಒಂದು ವಸ್ತುವು ಉಪಲಬ್ಧವಾಗುವುದರಲ್ಲಿ – ಒಂದೋ ಸ್ವಯಂ ಅದಂದೇ ಅಭಾವ, ಅಥವಾ ಅದರ ಅಭಿವ್ಯಂಜಕನ ಅಭಾವ, ಇವೆಂದೂ ಹೇತುಗಳಾಗಬಹುದು.

ಪ್ರತಿಯೊಂದು ಪದಾರ್ಥದಲ್ಲಿಯೂ, ಪ್ರತಿಯೊಂದು ಶಬ್ದದಲ್ಲಿಯೂ ಅಸ್ತಿತ್ವ, ಸತ್ತೆ ಅಥವಾ ಇರವನ್ನು ಒಪ್ಪಲೇಬೇಕಾಗುವುದು ಯಾರೇ ಆಗಲಿ, ಎಲ್ಲಿಯೇ ಆಗಲಿ, ಯಾವುದೇ ಪದಾರ್ಥವನ್ನು, ಹೇಗಾದರೂ ಕಲ್ಪಿಸಲಿ, ಅದರ ಸತ್ತೆಯನ್ನು ಸ್ವೀಕರಿಸದೆ ಕೆಲಸ ಸಾಗದು. ಫಲತಃ ಸತ್ತೆಯು ದಿನಾ ಎಲ್ಲವೂ ನಿಸ್ಸಂದೇಹ-ನಿಷ್ಪ್ರಯೋಜಕಗಳಾಗುವುವು. ಅಸತ್ ಪದವಾಣಾ, ಅಸತ್ ಪ್ರತ್ಯಯ, ಅಸತ್ ವಿದ್ಯಮಾನ, ಮುಂತಾದ 'ಅಸತ್' ಎಂಬುದನ್ನೊಂದು ಶಬ್ದವೇ ಹೇಳಲಾಗುವುದಿಲ್ಲ ಅದರಿಂದ ಯಾವುದೇ ಕಾರ್ಯದ ಅರ್ಥವೂ ಇರಲಾರದು ಏಕೆಂದರೆ ಅಸತ್ಪನ್ನಕ್ಕೆ ಕಾರಣತೆಯು ಅಸಂಭವ, ಅದುದರಿಂದ ಸತ್ತೇ ಕಾರಣವಾದೀತು. ಈ ಸತ್ತನ್ನು ಜಡವೆಂದು ಹೇಳುವುದಾದರೆ, ತನ್ನನ್ನು ತಾನೇ ಅದು ತಿಳಿದ ಕೊಳ್ಳಲಾರದು. ಹಾಗಿರುವಾಗ ಅನಂತ ಕಾರ್ಯಾಗಳನ್ನೂ, ಅವುಗಳ ಸಾಮಗ್ರಿಗಳನ್ನೂ, ನಿರ್ಮಾಣ ಪ್ರಕಾರಗಳನ್ನೂ ಹೇಗೆ ತಾನೆ ಅರಿಯಬಲ್ಲುದು? ಕಾರ್ಯವಿಲ್ಲದೆಯೂ ಸತ್ ಕಾರಣವಿರಬಲ್ಲುದು; ಆದರೆ ಕಾರ್ಯದ ಸ್ಥಿತಿಯಲ್ಲಿ, ಪರಿವೃತ್ತಿಯಲ್ಲಿ, ಜೀವನವೂ ಕಾರಣಕ್ಕೇ ಅಧೀನವಾಗಿರುತ್ತವೆ. ಈ ನ್ಯಾಯದಿಂದ, ಯಾವುದರಿಂದ ಎಲ್ಲವೂ ಅನಿರ್ಭವಿಸುತ್ತವೋ ಮತ್ತು ಎಲ್ಲ ವುಗಳ ವಿನಾ ಯಾವುದಿರಬಲ್ಲುದೋ – ಅದೇ ಕಾರಣವೂ ಅಧಿಷ್ಠಾನವೂ ಆಗಬಲ್ಲುದು. ಘಟಾದಿಗಳು ಪೃಥ್ವಿಯಲ್ಲಿ ಅಂತರ್ಭೂತಗಳಾಗಿವೆ, ಆದರೆ ತೇಜಸ್ಸು ಪೃಥ್ವವ್ಯಾಧಿಯಲ್ಲಿ ಅಂತರ್ಭವಿಸಿಲ್ಲ. ತೇಜದೊಳಗೆ ಜಲ-ಪೃಥಿವ್ಯಾದಿ ಎರಡೂ ಪಾರ್ಥಿವ ಪ್ರಪಂಚಗಳೂ ಬರಬಲ್ಲುವು. ಆದರೆ ಆಕಾಶವು ಅವೆಲ್ಲವುಗಳ ಒಳಗೂ ಹೊರಗೂ ಸರ್ವತ್ರ ಇದೆ ಆಕಾಶಕ್ಕಿಂತ ಅಂತರಂಗಗಳಾದ ಅಪಾಂತ್ವ, ಮಹತ್ತತ್ವ, ಅವ್ಯಕ್ತತತ್ವಾದಿ ಪದಾರ್ಥಗಳು ಯಾವುದರಲ್ಲಿ ಅಂತರ್ಭವಿಸುವವೋ ಮತ್ತು ಯಾವುದು ಅವುಗಳೊಳಗೆ ಎಲ್ಲವುಗಳ ಕಾರಣರೂಪದಲ್ಲಿದ್ದೂ ಅವುಗಳಿಗಿಂತ ದೃಢತ್ವಾಧಿಷ್ಠಾನವುಳ್ಳದ್ದೋ – ಅದೇ ಮಹಾ ಕಾರಣವಾಗಬಲ್ಲುದು ಆ ಅಂತಿಮ ಸತ್ತೇ ಸರ್ವದೇಶಗಳಿಗೂ, ಸರ್ವಕಾಲಗಳಿಗೂ, ವಸ್ತುಗಳಿಗೂ ಕಾರಣರೂಪವಾದ ಅಧಿಷ್ಠಾನವು. ಈ ಕಾರಣ ಅಥವಾ ಅಧಿಷ್ಠಾನವು ಎಲ್ಲವುಗಳಲ್ಲಿದ್ದೂ ಎಲ್ಲಕ್ಕಿಂತ ಸೂಕ್ಷ್ಮತ್ವಾಗಿ ಅನಂತವಾದುದು ಅದು ಎಲ್ಲವುಗಳಿಗಿಂತಲೂ ಅವರಿಚ್ಛಿನ್ನವೂ, ಸೂಕ್ಷ್ಮವೂ ನಿರ್ವಿಶೇಷವೂ, ನಿರ್ಗುಣವೂ, ಅದೃಶ್ಯವೂ, ಸ್ವಚ್ಛವೂ, ಅಸಂಗವೂ ಆಗಿದೆ. ಯದ್ಯಪಿ ಇಂತಹ ಯಾವುದೇ ವಸ್ತುವು ಕಾಣಿಸುವುದಿಲ್ಲವೆಂದು ಹೇಳಬಹುದಾದರೂ, ಒಂದು ದೃಷ್ಟಿಯಿಂದ ಇಡೀ ದರ್ಶನವು ಸರ್ವದಾ ಸರ್ವರಿಗೂ ಪ್ರತ್ಯಕ್ಷವಾಗಿದೆ. ಘಟ ದರ್ಶನಕ್ಕೆ ಮಂಚ ದರ್ಶನವು ಅನಿವಾರ್ಯವಾಗಿರುವಂತೆಯೇ, ಶ್ಯಾಮಪಟ ದರ್ಶನಕ್ಕಿಂತ ಮೊದಲೇ ಸ್ವಚ್ಛಪ್ರಕಾಶವಾದ ಸತ್ತಿನ ದರ್ಶನವೂ ಅನಿವಾರ್ಯವಾದುದು. ಆದರೆ ಕಾರ್ಯದ ಕಲ್ಪಿತ ಪದಾರ್ಥಗಳ ಅನಿರ್ವಚನೀಯವಾದೊಂದು ವಿಲಕ್ಷಣ ಜಡ ತತ್ತ್ವವೇ ಸೆಂದರೆ – ಅವು ತಮ್ಮ ಸ್ವಭಾವದಿಂದ ತಮ್ಮ ಕಾರಣ ಅಥವಾ ಅಧಿಷ್ಠಾನವನ್ನು ಮುಚ್ಚಿಡುತ್ತವೆ, ಇನ್ನೊಂದು ದೃಷ್ಟಿಯಿಂದ ನೋಡಿದಲ್ಲಿ, ಸತ್ತತ್ವವು ತೋರುವುದಿಲ್ಲವಾದುದರಿಂದಲೇ ಅದು ಪರಮಾರ್ಥ ತತ್ವವೆಂದು ನಿರ್ದಿಷ್ಟವಾಗಿರುವುದು, ಜಗತ್ತು ಗೋಚರಿಸುತ್ತದೆ, ಆದುದರಿಂದಲೇ ಅದು ಇಲ್ಲ ಲೋಕದಲ್ಲಾದರೋ ಯಾವುದು ತೋರುತ್ತದೋ, ಅದಿದೆಯೆಂದೂ, ಯಾವುದು ಕಾಣಿಸುವುದಿಲ್ಲವೋ, ಅದಿಲ್ಲವೆಂದೂ ರೂಢಿಯಾಗಿದೆ. ಆದರೆ ವಿಜ್ಞಾನ ಹೇಳಿಕೆಯೇನೆಂದರೆ – ಯಾವುದು ಕಾಣಿಸುತ್ತದೆಯೋ, ಅದು ಕಾಣುತ್ತದಾದುದರಿಂದಲೇ ಮಿಥ್ಯೆ, ಯಾವುದು ಗೋಚರಿಸುವುದಿಲ್ಲವೋ, ಅದೇ ವಾಸ್ತವಾರ್ಥವಾದ ಸತ್ಯ ಅದೃಶ್ಯವೆ ದೃಶ್ಯರೂಪವು, ಈ ರೀತಿ ಸರ್ವಸತ್ತಾ, ಸರ್ವಾಧಿಷ್ಠಾನ, ಸರ್ವ ಪ್ರಕಾಶಕ, ಸರ್ವಾಂತರಾತ್ಮ, ಅಖಂಡಸತ್, ಅಖಂಡಬೋಧ ಸ್ವರೂಪವೇ ಅಂತಿಮ ತತ್ವವು; ಇದಕ್ಕಿಂತ ಮುಂದೆ ಜಿಜ್ಞಾಸೆಯು ಪ್ರಶಾಂತವಾಗುತ್ತದೆ.

ಈ ಯುಕ್ತಿಗಳಿಂದ ಅಪರಿಗಣಿತ ಪ್ರಪಂಚೋತ್ಪಾದಿನೀ – ಅನಿರ್ವಚನೀಯ ಶಕ್ತಿ ಸಂಪನ್ನ, ಅಖಂಡ, ಅನಂತ, ನೈಪ್ರಕಾಶವೇ ಈ ಸರ್ವ ಪ್ರಪಂಚಕ್ಕೂ ಮೂಲವೆಂದು ಸಿದ್ಧವಾಗುವುದು. ವಿಕಾಸವಾದದ ಮತಾನುಸಾರ ವಸ್ತುವಿನಲ್ಲಿ ಅಸ್ಪಷ್ಟತೆಯೂ ನಿಕೃಷ್ಟತೆಯೂ ಪ್ರಮಾಣೀಕೃತವಾಗಿ, ಸಲ್ಲಕ್ಷ ಅಥವಾ ಫಲದಲ್ಲಿ ಸ್ಪಷ್ಟತೆಯೂ, ಉತ್ಕೃಷ್ಟತೆಯೂ ನಿಶ್ಚಿತವಾಗುತ್ತದೆ. ಆದರೆ ಪ್ರಾಚೀನ ವೈದಿಕ ಮತದಲ್ಲಿ ಮೂಲದ ಉತ್ಕೃಷ್ಟತೆಯೂ, ಸಲ್ಲಕ್ಷಾದಿಗಳ ನಿಕೃಷ್ಟತೆಯೂ ಸಿದ್ಧವಾಗುತ್ತದೆ. ಆದ್ದರಿಂದಲೇ ' ಊರ್ಧ್ವಮೂಲಮಧಃಶಾಖಮ್ ಶಬ್ದಶ್ಚಂ ಪ್ರಾಹುರವ್ಯಯಮ್ ' ಎಂಬ ಗೀತಾ ವಾಕ್ಯದಲ್ಲಿ ಸಂಸಾರ ವೃಕ್ಷದ ಮೂಲವನ್ನು ಉತ್ಕೃಷ್ಟವೆಂದು ಹೇಳಲಾಗಿದೆಯಲ್ಲದೆ ಶಾಖೆಯನ್ನು ನಿಕೃಷ್ಟವೆಂದು ಹೇಳಿದೆ. ಹೊಂಗಿಸಿ ದೃಷ್ಟಿಯಿಂದ ಉತ್ಕೃಷ್ಟವಾಕ್ಯದ ಭಾವವು, ಸಂಸಾರವೆಂಬುದೊಂದು ಅಶ್ವತ್ಥ ವೃಕ್ಷವೆಂದೂ, ಅದರ ಬೇರು ಮೇಲ್ಮಡೆಯಿಂದೆಯೂ ಶಾಖೆಗಳು ಕೆಳಗಡೆಯಿಂದೆಯೂ ತೋರುತ್ತದಾದರೂ ಇದೊಂದು ರೂಪಕವೇ ಸರಿ, ತಾತ್ಪರ್ಯವೇನೆಂದರೆ – ಈ ಸಂಸಾರ ವೃಕ್ಷದ ಮೂಲವು ವ್ಯಾಪಕವೂ, ಶುದ್ಧವೂ, ಮುಹತ್ತೂ, ಅವ್ಯಕ್ತವೂ ಆದುದು; ಶಾಖೆಯಲ್ಲದಾವಿಗಳು ಪರಿಚ್ಛಿನ್ನವೂ, ಅಶುದ್ಧವೂ, ಅಲ್ಪವೂ, ಮರ್ತ್ಯವೂ ಆದುವುಗಳು. ಇಲ್ಲಿ ಸ್ಪಷ್ಟವಾಗಿಯೇ ಆಧುನಿಕ ವಿಕಾಸವಾದವು ಖಂಡಿಸಲ್ಪಡುತ್ತದೆ. ಡಾರ್ವಿನಿಸಂ ಮತವೇ ಸೆಂದರೆ – ಮೂಲ ಕಾರಣನಾದ ಪರಮಾತ್ಮನು ನಿಷ್ಕಾರಣನಾಗಿಯೇ ನಿಶ್ಚಿತ ವೈಚಿತ್ರ್ಯದ ವಿಧಾತೃಕನೆಂದಾದರೆ, ಅವನಲ್ಲಿ ವೈಷಮ್ಯವಿರುತಿಂಬುದು ಅನಿವಾರ್ಯವಾಗುವುದು, ಅತಃ ಸರ್ವ ಶಾಸ್ತ್ರಗಳೆ ವಿಚಿತ್ರ ಕರ್ಮಾನುಸಾರವಾಗಿಯೇ ಭಗವಂತನು ವಿಶ್ವದ ವಿಧಾತೃನನ್ನ ನಾಡುತ್ತಾನೆ. ಪ್ರಹಾ ಪ್ರಳಯ ಕಾಲದಲ್ಲಿ ಅನಂತ ಬ್ರಹ್ಮಾಂಡಗಳು ಕಾರಣನಲ್ಲಿ ವಿಲಯ, ಕೊಂಡುತ್ತವೆ ಮತ್ತು ಸೃಷ್ಟಿ ಕಾಲದಲ್ಲಿ ಅದೇ ಮುಖ್ಯಕಾರಣದಿಂದ ವಿನಃ ಪ್ರಾಧಾ ಭೂಪದಾರ್ಥ ತ್ಪದೆ ಚಿಕ್ಕದಾದ ಪಟ್ಟಿ ಜೀವಜಡೊಳಗೆ ಅಂತರ, ಶಾಖ, ಸ್ಕಂಧ, ಶಾಖೆ, ಉಪಶಾಖೆ, ಪತ್ರ, ಪಲ್ಲವ ಫಲ – ಎಲ್ಲವೂ ಅಡಗಿರುತ್ತವೆ. ಹೀಗಿಲ್ಲದಿದ್ದರೆ ಘಾಣಿ ಅನಿಲ ಜಲಗಳ ಸಂಸರ್ಗವಿದ್ದಂತೆ ಅದರ ವಿಕಾಸ ಹೇಗಾದೀತು? ಇಷ್ಟೇ ಅಲ್ಲ ಒಂದು ಸಣ್ಣದ ಬೀಜದಲ್ಲಿ ಅಜ್ಞಾತ-ಖರ್ವಗಟ್ಟಲೆ ಪಟ್ಟುಸ್ಪಷ್ಟಗಳ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕಾಗುವುದು. ಹೀಗೆಯೇ ಮಹಾಕಾರಣದಿಂದಲೇ ಸಮಸ್ತ ಪ್ರಪಂಚದ ಪ್ರಾದುರ್ಭಾವವೆಂದು ಮುನ್ನಿಸಿದ ಒಳಿಕ ಅವಸರಲ್ಲಿ ಅನಂತ ವಿಜ್ಞಾನಗಳೂ ಅನಂತ ಶಕ್ತಿಗಳೂ ಇವೆಯೆಂದು ಮುನ್ನಿಸುವುದು ಅನಿವಾರ್ಯವಾಗುವುದು

[ಶೇಷ]